**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-161/2020 **DW**-2

**ದಿಃ 12.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಬಿ ಎಚ್ ವಕೀಲರಿಂದಃ**

1. 7 ನೇ ಪ್ರತಿವಾದಿ ನನಗೆ ಮಗಳಾಗಬೇಕೆಂದರೆ ಸರಿ. ಸುತಗಟ್ಟಿಯಲ್ಲಿ ಆಸ್ತಿ ತೆಗೆದುಕೊಂಡ ಬಗ್ಗೆ ಎಲ್ಲಾ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಸ್ವಲ್ಪ ನೋಡಿರುತ್ತೇನೆ ಎನ್ನುತ್ತಾರೆ. ನ್ಯಾಯಾಲಯಕ್ಕೆ ತಕರಾರು ಸಲ್ಲಿಸಿದ್ದು ಆ ತಕರಾರಿಗೆ ಮಾಹಿತಿಯನ್ನು ನೀವು ಕೊಟ್ಟಿದ್ದೀರಾ ಅಥವಾ ನಿಮ್ಮ ಮಗಳು ಕೊಟ್ಟಿದ್ದಾರಾ ಎಂದರೆ ಸಾಕ್ಷಿ ಇಬ್ಬರು ಕೂಡಿ ಕೊಟ್ಟಿದ್ದೇವೆ ಎನ್ನುತ್ತಾರೆ. ಸದರಿ ತಕರಾರಿಗೆ ಯಾರು ಸಹಿ ಮಾಡಿದ್ದಾರೆಂದರೆ ಸಾಕ್ಷಿ ನಾನೇ ಮಾಡಿದ್ದೇನೆ ಎನ್ನುತ್ತಾರೆ. ಪ್ರಮಾಣ ಪತ್ರ ಬರೆಯಲು ಮಾಹಿತಿ ನಾನೇ ಕೊಟ್ಟಿದ್ದು ಅದರಲ್ಲಿರುವ ವಿಷಯ ನನಗೆ ಗೊತ್ತಿದೆ. ನನ್ನ ಪ್ರಮಾಣ ಪತ್ರದಲ್ಲಿ ನಾನು ಎಲ್ಲಾ ರೆವಿನ್ಯೂ ರೆಕಾರ್ಡ್ಸ ಮತ್ತು ಮ್ಯುಟೇಶನ ಇವುಗಳನ್ನು ನೋಡಿರುತ್ತೇನೆಂದು ಹೇಳಿರುತ್ತೇನೆಂದರೆ ಸಾಕ್ಷಿ ನಾನು ನೋಡಿಲ್ಲ ಖರೀದಿಯಾರು ಮಾಡಿರುತ್ತಾರೋ ಅವರು ನೋಡಿದ್ದಾರೆಂದು ನುಡಿಯುತ್ತಾರೆ. ಯಾವ ಯಾವ ದಾಖಲೆಗಳನ್ನು ನೋಡಿದ್ದೇನೆಂಬುದನ್ನು ಸಾಕ್ಷಿ ಪ್ರಮಾಣ ಪತ್ರ ಮಾಡುವ ಪೂರ್ವದಲ್ಲಿ ತಿಳಿದುಕೊಂಡಿದ್ದೀರೋ ಇಲ್ಲವೋ ಎಂದರೆ ಸಾಕ್ಷಿ ನಾನು ನೋಡಿಲ್ಲ ಎನ್ನುತ್ತಾರೆ. ಸದರಿ ಜಿಪಿಎ ಸಲ್ಲಿಸುವ ಪೂರ್ವದಲ್ಲಿ ಮ್ಮ ಮಗಳು ಯಾವ ಯೂವ ದಾಖಲೆಗಳನ್ನು ನೋಡಿದ್ದೇನೆಂಬುದನ್ನು ಮಾಹಿತಿ ಕೊಟ್ಟರೋ ಇಲ್ಲವೋ ಎಂದರೆ ಸಾಕ್ಷಿ ಇಲ್ಲ ಎನ್ನುತಾರೆ.

2. ಸುತಗಟ್ಟಿ ಗ್ರಾಮದ ಬ್ಲಾಕ ನಂಃ70 ರ ಆಸ್ತಿ ಮೂಲತಃ ಯಾರಿಂದ ಬಂದಿದ್ದು ಎಂದರೆ ಸಾಕ್ಷಿ ಅದು ಗೊತ್ತಿಲ್ಲಎನ್ನುತ್ತಾರೆ. ಬ್ಲಾಕ ನಂಃ70 ತಿಪ್ಪಣ್ಣ ತಂದೆ ಯಲ್ಲಪ್ಪ ಪೂಜಾರ ಎಂಬುವವರಿಗೆ ಲ್ಯಾಂಡ ಟ್ರಿಬುನಲ್ಲನಿಂದ ಮಂಜೂರಾಗಿದ್ದು ಎಂದರೆ ಸಾಕ್ಷಿ ಅದು ಗೊತ್ತಿಲ್ಲ ಎನ್ನುತ್ತಾರೆ. ಸದರಿಯವರು 1984 ರಲ್ಲಿ ಮರಣ ಹೊಂದಿದ ನಂತರ ಸದರಿ ಆಸ್ತಿ ಬಸಪ್ಪ ಮತ್ತು ತಿಪ್ಪವ್ವ ಇವರ ಹೆಸರಿಗೆ ಎಂಟ್ರಿಯಾಯಿತು ಎಂದರೆ ಸಾಕ್ಷಿ ಅದು ಕೂಡಾ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಬಸಪ್ಪ ಇವರಿಗೆ ಬೀಮವ್ವ ಎಂಬ ಹೆಂಡತಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಬಸಪ್ಪ ಮತ್ತು ಬೀಮವ್ವ ಇವರ ದಾಂಪತ್ಯ ಜೀವನದಿಂದ ಮೂರು ಗಂಡು ಮಕ್ಕಳು ಹಾಗೂ ಮೂರು ಮಂದಿ ಹೆಣ್ಣು ಮಕ್ಕಳೆಂದರೆ ನನಗೆ ಗೊತ್ತಿಲ್ಲ. ಸದರಿಯವರಿಗೆ

ಎಷ್ಟು ಮಂದಿ ಮಕ್ಕಳು ಎಂಬುದನ್ನು ನೀವು ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಆಸ್ತಿ ತೆಗೆದುಕೊಳ್ಳಬೇಕಾದರೆ ಅವರ ಕುಟುಂಬದ ಎಲ್ಲಾ ಹಿಸ್ಟರಿ ಪಡೆಯುತ್ತಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಆಸ್ತಿ ಬಸಪ್ಪನ ತಂದೆಯಿಂದ ಬಂದಂತಹ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ಉತಾರವನ್ನು ತೋರಿಸಿ ಸಾಕ್ಷಿ ಅದನ್ನು ನೋಡಿ ಅದರಲ್ಲಿ ಪೂಜಾರ ಬಸಪ್ಪ ತಂದೆ ತಮ್ಮಣ್ಣ, ಕೇಟನಾಳ ತಿಪ್ಪವ್ವ ಕೋಂ ದ್ಯಾಮಪ್ಪ ಮೇಲಿನ ಜಂಟಿ ಎಂಬುದಾಗಿ ಹಾಗೂ ಪೂಜಾರ ಬೀಮಪ್ಪ ಬಸಪ್ಪ , ಪೂಜಾರ ಹನುಮಂತಪ್ಪ ಬಸಪ್ಪ ಪೂಜಾರ ಆನಂದಪ್ಪ ಬಸಪ್ಪ ಇವರು ಹಕ್ಕು ಬದಲಾವಣೆ ಪಡೆದವರು ಮೇಲಿನ ಜಂಟಿ ಎಂಬುದಾಗಿ ತೋರಿಸಲಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ನಿಪಿ 35 ಎಂದು ಗುರುತಿಸಲಾಯಿತು. ಬಸಪ್ಪ ಹಾಗೂ ತಿಪ್ಪವ್ವ ಇವರ ಹೆಸರು ಯಾವ ರೀತಿ ಕಡಿಮೆಯಾಯಿತು ಎಂಬ ಬಗ್ಗೆ ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿ ವಿಚಾರ ಮಾಡಿಲ್ಲ ಎನ್ನುತ್ತಾರೆ. ಬಸಪ್ಪ ಹಾಗೂ ತಿಪ್ಪವ್ವ ಇವರ ಹೆಸರನ್ನು ಕಡಿಮೆ ಮಾಡಿ ಕೇವಲ ಮೂರು ಜನ ಗಂಡು ಮಕ್ಕಳ ಹೆಸರನ್ನು ಎಂಟ್ರಿ ಮಾಡಿಸಿಕೊಂಡಿರುತ್ತಾರೇಂದರೆ ಸರಿ. ಬಸಪ್ಪನ ಹೆಂಡತಿ ಅಂದರೆ ಪ್ರತಿವಾದಿ 1 ಹಾಗೂ ವಾದಿಯರು ಹಾಗೂ ಪ್ರತಿವಾದಿ 5 ರವರು ಈಗಲೂ ಕೂಡಾ ಜೀವಂತ ಇದ್ದಾರೆಂದರೆ ಸರಿ.

ಪಾಟೀ ಸವಾಲುಃ ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**